## ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:-ಶ್ರೀ ಪಿ. ಸನಾವುಲ್ಲಾ, ಹಿಂದಿನ ಕಾರ್ಯನಿರ್ವಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶಿರಾ, ತುಮಕೂರು, ಜಿಲ್ಲೆ ಇವರ ವಿರುದ್ಧದ ಶಿಸ್ತು ಕ್ರಮ-ಅಂತಿಮ ಆದೇಶ.

ಓದಲಾಗಿದೆ: 1. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ 73 ವಿಸೇಬಿ 2015 ದಿ:16-04-2015.

2. ಶ್ರೀ ಪಿ. ಸನಾವುಲ್ಲಾ, ಇವರ ಲಿಖಿತ ಹೇಳಿಕೆ. ದಿ:10-06-2015.

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಇವರ ಪತ್ರ ಸಂಖ್ಯೆ:ತುಜಿಪಂ:ಆಡಳಿತ(1):ವಿವ; 10:2015-16/120. ದಿನಾಂಕ:07-09-2015.

----

ಪ್ರಸ್ತಾವನೆ:-

ಶ್ರೀ ಪಿ. ಸನಾವುಲ್ಲಾ, ಇವರು ಈ ಹಿಂದೆ ಕಾರ್ಯನಿರ್ವಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಶಿರಾ, ತುಮಕೂರು, ಜಿಲ್ಲೆ, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ, ಇವರ ವಿರುದ್ಧ ಶ್ರೀ ರವಿ ಹೆಚ್.ಎನ್. ಹನುಮಂತರಾಯಪ್ಪ, ಉದ್ದರಾಮಹಳ್ಳಿ ಕ್ರಾಸ್ ರವರು ಲೋಕಾಯುಕ್ತದಲ್ಲಿ ದಾಖಲಿಸಿರುವ ದೂರಿಗೆ ಸಂಬಂಧಿಸಿದಂತೆ ಮುಕಾನಿಅ, ಜಿ.ಪಂ. ತುಮಕೂರು ಕಛೇರಿಯು ತನಿಖೆ ನಡೆಸಿ ಸಲ್ಲಿಸಿರುವ ವರದಿಯನ್ನಾಧರಿಸಿ ಆರೋಪಿತ ಅಧಿಕಾರಿ ವಿರುದ್ಧ ಕನಾಸೇ (ವನಿಮೇ) ನಿಯಮಗಳು, 1957ರ ನಿಯಮ 11ರ ಅಡಿಯಲ್ಲಿ ಕೆಳಕಂಡ ಎರಡು ಆರೋಪಗಳ ಕುರಿತು ಇಲಾಖಾ ವಿಚಾರಣೆ ಜರುಗಿಸಲು ನಿರ್ಣಯಿಸಿ, ದೋಷಾರೋಪಣಾ ಪಟ್ಟಿಯನ್ನು ಕಾರಣ ಕೇಳುವ ನೋಟೀಸಿನೊಂದಿಗೆ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 16.4.2015 ರಂದು ಜಾರಿಗೊಳಿಸಲಾಗಿತ್ತು.

(1) ಶ್ರೀ. ಸನಾವುಲ್ಲಾ, ಇವರು ಶಿರಾ ತಾ.ಪಂ. ಕಛೇರಿಯಲ್ಲಿ ಕಾನಿಅ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಶಿರಾ ತಾಲ್ಲೂಕು ನಾದೂರು ಗ್ರಾ.ಪಂ. ವ್ಯಾಪ್ತಿಗೆ ಸೇರಿದ್ದ ಉದ್ದರಾಮನಹಳ್ಳಿ ಕ್ರಾಸ್‌ನ ಲೇಟ್ ಶ್ರೀ ಕರಿಯಪ್ಪ ಬಿನ್ ಕೆಂಚಪ್ಪ, ಇವರ ಹೆಸರಿನಲ್ಲಿ ಇದ್ದ 30X40 ನಿವೇಶನವನ್ನು ನಿಯಮಬಾಹಿರವಾಗಿ ಶ್ರೀ ಪಟ್ಟಮ್ಮ ಕೋಂ. ರಾಮಣ್ಣ, ಇವರ ಹೆಸರಿಗೆ ಖಾತೆ ಬದಲಾವಣೆ ಮಾಡಿರುವ ಕುರಿತು ಖುದ್ದು ವಿಚಾರಣೆ ನಡೆಸಿ, ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸುವಂತೆ ಮಾನ್ಯ ಲೋಕಾಯುಕ್ತ, ತುಮಕೂರು ಇವರು ಸೂಚಿಸಿದ್ದರೂ, ಆರೋಪಿ ಅಧಿಕಾರಿಯು ಯಾವುದೇ ಕ್ರಮವಹಿಸದೇ ಕರ್ತವ್ಯಲೋಪ ಎಸಗಿರುತ್ತಾರೆ.

(2) ಶ್ರೀ ಕರಿಯಪ್ಪ ಇವರ ಹೆಸರಿನಲ್ಲಿದ್ದ ನಿವೇಶನವನ್ನು ಶ್ರೀಮತಿ ಪಟ್ಟಮ್ಮ ಕೋ, ರಾಮಣ್ಣ ಇವರ ಹೆಸರಿಗೆ ಬದಲಾವಣೆ ಮಾಡಿರುವುದನ್ನು ಪ್ರಶ್ನಿಸಿ, ಶ್ರೀ ರವಿ ಹೆಚ್.ಬಿ.ಎನ್., ಹನುಮಂತರಾಯಪ್ಪ, ಇವರು ಸಲ್ಲಿಸಿರುವ ತಕರಾರು ಅರ್ಜಿಯ ಕುರಿತು ದಿನಾಂಕ 6-3-2013 ರಂದು ನಡೆದ ನಾದೂರು ಗ್ರಾ.ಪಂ. ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಸದರಿ ಸಭೆಯಲ್ಲಿ ಖಾತೆ ಬದಲಾವಣೆ ಕ್ರಮವು ನಿಯಮಬಾಹಿರವೆಂದು ನಿರ್ಣಯಿಸಿದ್ದರನ್ವಯ ಖಾತೆ ರದ್ದುಪಡಿಸಿ ಶ್ರೀಮತಿ ಪುಟ್ಟಮ್ಮ, ಇವರಿಗೆ 2010-11 ನೇ ಸಾಲಿನ ಬಸವ ವಸತಿ ಯೋಜನೆಯಡಿ ಮೂರು ಮತ್ತು ನಾಲ್ಕನೇ ಹಂತದ ಬಿಲ್ ಪಾವತಿಗಾಗಿ ವಿವರಗಳನ್ನು ಆರ್.ಜಿ.ಹೆಚ್.ಸಿ.ಎಲ್. ವೆಬ್‌ಸೈಟಿನಲ್ಲಿ ಜಿ.ಪಿ.ಎಸ್. ಮಾಡಿರುವ ಬಗ್ಗೆ ಮಾನ್ಯ ಲೋಕಾಯುಕ್ತರು, ತುಮಕೂರು ರವರು ಖುದ್ದು ವಿಚಾರಣೆ ನಡೆಸಿ, ವರದಿಯನ್ನು ದಾಖಲೆಗಳೊಂದಿಗೆ ಸಲ್ಲಿಸುವಂತೆ ಸೂಚಿಸಿದರು. ಆದರೆ, ಅಧಿಕಾರಿಯು ಈ ಕುರಿತು ಯಾವುದೇ ಕ್ರಮವಹಿಸದೇ ಕರ್ತವ್ಯಲೋಪ ಎಸಗಿರುತ್ತಾರೆ.

..2..

GO

ಮೇಲೆ ಕ್ರಮಸಂಖ್ಯೆ: (2)ರಲ್ಲಿ ಓದಲಾದ ದಿ:10-06-2015 ಪತ್ರದಲ್ಲಿ ಸದರಿ ನೋಟೀಸಿಗೆ ಶ್ರೀ ಪಿ. ಸನಾವುಲ್ಲಾ, ಇವರು ಈ ಕೆಳಕಂಡಂತೆ ಲಿಖಿತ ರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ.

ಶಿರಾ ತಾಲ್ಲೂಕು ನಾದೂರು ಗ್ರಾಮದ ಶ್ರೀ ಕರಿಯಪ್ಪ ಬಿನ್ ಕೆಂಚಪ್ಪ, ಇವರ ಹೆಸರಿನಲ್ಲಿದ್ದ 30x40 ನಿವೇಶನವನ್ನು ಶ್ರೀಮತಿ ಪುಟ್ಟಮ್ಮ ಕೋಂ ರಾಮಣ್ಣ ಇವರ ಹೆಸರಿಗೆ ಖಾತೆ ಬದಲಾವಣೆ ಮಾಡಿರುವ ಬಗ್ಗೆ ನಾದೂರು ಗ್ರಾ.ಪಂ.ಯ ಸಾಮಾನ್ಯ ಸಭೆಯಲ್ಲಿ ಖಾತೆ ಬದಲಾವಣೆ ಕ್ರಮವನ್ನು ರದ್ದುಪಡಿಸಿರುವುದು / ಬದಲಾವಣೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿರುವುದಿಲ್ಲವೆಂದು, ಹಾಗೂ ಪಂಚಾಯತ್ ರಾಜ್ ಕಾಯ್ದೆ, 1993 ನೇ ಅಧಿನಿಯಮದಡಿ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿದ ವಿಷಯವನ್ನು 6 ತಿಂಗಳ ಒಳಗೆ ರದ್ದುಪಡಿಸಿರುವ ಅಧಿಕಾರ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಇರುತ್ತದೆಂದು ತಿಳಿಸಿರುತ್ತಾರೆ. ಹಾಗೂ ಎರಡನೇ ಆರೋಪದಲ್ಲಿ ತಿಳಿಸಿರುವಂತೆ ಶ್ರೀಮತಿ ಪುಟ್ಟಮ್ಮ, ಇವರಿಗೆ ಬಸವ ವಸತಿ ಯೋಜನೆಯಡಿ 3 ಮತ್ತು 4 ನೇ ಬಿಲ್ ಪಾವತಿ ಆಗಿರುವುದಿಲ್ಲವೆಂದು, ಆದರೆ 1 ಮತ್ತು 2ನೇ ಬಿಲ್ ಆಗಿದ್ದನ್ನು ಗಮನಿಸಿ, ಪ್ರಕರಣದಲ್ಲಿ ತಕರಾರು ಇದ್ದ ಕಾರಣ, ಮುಂದಿನ ಕ್ರಮವಹಿಸಿರುವುದಿಲ್ಲವೆಂದು ಸಮಜಾಯಿಷಿ ನೀಡಿರುತ್ತಾರೆ. ಹಾಗೂ ತಾವು ಸದರಿ ತಾ.ಪಂ.ಯಲ್ಲಿ ದಿನಾಂಕ 1-11-2013 ರಿಂದ 30-4-2014 ರವರೆಗೆ ಅಂದರೆ 6 ತಿಂಗಳು ಮಾತ್ರ ಕಾರ್ಯನಿರ್ವಹಿಸಿದ್ದು, ದಿನಾಂಕ 30-4-2014 ರಂದು ನಿವೃತ್ತಿ ಹೊಂದಿರುವ ಕಾರಣ, ಈ ಎರಡೂ ಆರೋಪಗಳಿಂದ ತಮ್ಮನ್ನು ಆರೋಪಮುಕ್ತಗೊಳಿಸುವಂತೆ ಕೋರಿರುತ್ತಾರೆ.

ದಿನಾಂಕ:16-04-2015ರ ನೋಟೀಸಿಗೆ ಅಪಾದಿತರು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ~~ಅಧಿಕಾರಿ, ಜಿಲ್ಲಾ ಪಂಚಾಯತಿ;~~ ತುಮಕೂರು ಇವರ ಅಭಿಪ್ರಾಯವನ್ನು ದಿನಾಂಕ 22-7-2015ರ ಪತ್ರದಲ್ಲಿ ಕೋರಲಾಗಿತ್ತು.

ಏತನ್ಮಧ್ಯೆ, ಪ್ರಕರಣವು ಈ ಹಂತದಲ್ಲಿರುವಾಗಲೇ, ಶ್ರೀ ಸನಾವುಲ್ಲಾ, ನಿವೃತ್ತ ಕಾನಿಅ, ಇವರ ಪತ್ನಿಯವರು ಸರ್ಕಾರಕ್ಕೆ ದಿನಾಂಕ 5-9-2015 ರಂದು ಮನವಿ ಸಲ್ಲಿಸಿ, ತಮ್ಮ ಪತಿಯವರು ದಿನಾಂಕ 14-8-2015 ರಂದು ರಸ್ತೆ ಅಪಘಾತದಲ್ಲಿ ನಿಧನರಾಗಿದ್ದೆಂದು ತಿಳಿಸುತ್ತಾ, ತಮ್ಮ ಪತಿಯವರಿಗೆ ನಿವೃತ್ತಿ ಹೊಂದಿದ ಒಂದೂವರೆ ವರ್ಷ ಕಳೆದರೂ ಯಾವುದೇ ನಿವೃತ್ತಿ ಸೌಲಭ್ಯ, ಪಿಂಚಣಿ ಮಂಜೂರಾಗದ ಕಾರಣ, ತಮಗೆ ಆರ್ಥಿಕವಾಗಿ ತೊಂದರೆಯಾಗಿದ್ದು, ತ್ವರಿತವಾಗಿ ಸರ್ಕಾರದಿಂದ ಲಭ್ಯವಾಗುವ ಎಲ್ಲಾ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮೇಲ್ಕಂಡ ವಿವರಗಳ ಪರಿಶೀಲನೆಯಿಂದ ಸದರಿ ಪ್ರಕರಣದಲ್ಲಿ ಆರೋಪಿತ ಅಧಿಕಾರಿಯಾದ ಶ್ರೀ ಸನಾವುಲ್ಲಾ, ಇವರ ವಿರುದ್ಧ ಮಾಡಿರುವ ಎರಡು ಆರೋಪಗಳಲ್ಲಿ ಯಾವುದೇ ಆರ್ಥಿಕ ನಷ್ಟ/ ಹಣ ದುರುಪಯೋಗದಂತಹ ಗಂಭೀರ ಸ್ವರೂಪದ ಆರೋಪಗಳಿಲ್ಲದಿರುವುದು ಮತ್ತು ಮಾನ್ಯ ಲೋಕಾಯುಕ್ತರವರು ಮಾಡಿದ್ದ ದೂರಿನ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದರೂ ಸಹ, ಅಧಿಕಾರಿಯವರು ತುರ್ತು ಕ್ರಮವಹಿಸದೇ ವಿಳಂಬಿಸಿ, ಕರ್ತವ್ಯಲೋಪ ಎಸಗಿರುವುದು ಮಾತ್ರ ಕಂಡು ಬರುತ್ತದೆ. ಮುಂದುವರೆದು, ಅಧಿಕಾರಿಯವರು ಈಗಾಗಲೇ ನಿಧನ ಹೊಂದಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಜರುಗಿಸಲು ಕನಾಸೇ (ವನಿಮೇ) ನಿಯಮಗಳು, 1957ರ ನಿಯಮ ಅಡಿಯಲ್ಲಿ ಅವಕಾಶವಿರುವುದಿಲ್ಲ. ಆಪಾದಿತ ಅಧಿಕಾರಿ ಮರಣ ಹೊಂದಿರುವ ಅಂಶವನ್ನು ತುಮಕೂರು ಜಿಲ್ಲಾ ಪಂಚಾಯತ್‌ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ 07.09.2015 ರ ಪತ್ರದಲ್ಲಿ ದೃಢಪಡಿಸಿರುತ್ತಾರೆ.

ಆದುದರಿಂದ, ಶ್ರೀ ಸನಾವುಲ್ಲಾ, ಇವರು ಈಗಾಗಲೇ ನಿಧನ ಹೊಂದಿರುವುದರಿಂದ ಮತ್ತು ಅವರ ವಿರುದ್ಧ ಯಾವುದೇ ಹಣ ದುರುಪಯೋಗದ ಆರೋಪಗಳು ಇರುವುದಿಲ್ಲವಾದ್ದರಿಂದ ನಿಯಮಗಳನ್ವಯ ಅವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಅವಕಾಶ ಇಲ್ಲದ ಅಂಶವನ್ನು ಪರಿಗಣಿಸಿ, ಅವರ ವಿರುದ್ಧ ಶಿಸ್ತುಕ್ರಮವನ್ನು ಈ ಹಂತಕ್ಕೆ ಮುಕ್ತಾಯಗೊಳಿಸಲು ತೀರ್ಮಾನಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 73 ವಿಸೇಬಿ 2015 ದಿನಾಂಕ: 11-12-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಸರ್ಕಾರವು ಶ್ರೀ ಪಿ. ಸನಾವುಲ್ಲಾ, ಹಿಂದಿನ ಕಾರ್ಯನಿರ್ವಹಕ ಅಧಿಕಾರಿ, ತಾ.ಪಂ. ಶಿರಾ, ತುಮಕೂರು, ಜಿಲ್ಲೆ ಪ್ರಸ್ತುತ ನಿವೃತ್ತ ಇವರಿಗೆ ದಿನಾಂಕ16.04.2015 ರ ನೋಟೀಸ್ ಸಂಖ್ಯೆ: ಗ್ರಾಅಪ 73 ವಿಸೇಬಿ 2015ರ ಜೊತೆ ಮಾಡಿರುವ ಆರೋಪಗಳಿಂದ ದೋಷ ಮುಕ್ತ ಗೊಳಿಸಿ, ಪ್ರಕರಣವನ್ನು ಮುಕ್ತಾಯಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು.
3. ಸಂಬಂಧಿಸಿದ ಅಧಿಕಾರಿಗೆ.(ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು (ಇವರ ಮುಖಾಂತರ).

**ಪ್ರತಿಯನ್ನು ಮಾಹಿತಿಗಾಗಿ:-**

1) ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ ಉಪ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

GO